


Rotary

# विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –20 ದಿನಾಂಕ : 27–11–2024


## ದಿನಾಂಕ: 27.11.2024 ರ ವಾರದ ಸಭೆಯ ವರದಿ

**ದಿನಾಂಕ: 27–11–2024 ರಂದು 5 ನೇ ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮವು ಶಿವಮೊಗ್ಗ ನಗರದ ಕೆ.ಆರ್.ಪುರಂನ ಶ್ರೀ ರಾಮ ಮಂದಿರದ ಕಲ್ಯಾಣ ಮಂದಿರದಲ್ಲಿ ನಡೆಯಿತು. ನಮ್ಮ ಕ್ಲಬ್‌ನ ಮಾಜಿ ಖಜಾಂಚಿ ರೊ. ಸಿ. ಸತೀಶ್ ಕುಮಾರ್ ಅತ್ಯಂತ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ನಮ್ಮ ಕ್ಲಬ್‌ನ ಸದಸ್ಯರುಗಳಿಂದ ಮನರಂಜನೆ ಹಾಗೂ ರೋಟರಿ ಫೌಂಡೇಷನ್‌ಗೆ ದೇಣಿಗೆ ಸಲ್ಲಿಸುವಿಕೆ ನಡೆಯಿತು. ವೇದಿಕೆಯಲ್ಲಿ ರೊ.ಕೆ. ಸೂರ್ಯನಾರಾಯಣ ಉಡುಪರು, ಅಧ್ಯಕ್ಷರು, ರೊ.ಎನ್.ಜಿ. ಉಷಾ ಕಾರ್ಯದರ್ಶಿ ಹಾಗೂ ಕಾರ್ಯಕ್ರಮ ಸಮಿತಿ ಚೇರ್ಮನ್ ರೊ. ಎನ್.ವಿ.ಭಟ್ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.**




ರೊ.ಎನ್.ವಿ.ಭಟ್‌ರವರಿಂದ "ಹಾಲಲ್ಲಾದರು ಹಾಕು ನೀರಲ್ಲಾದರು ಹಾಕು ರಾಘವೇಂದ್ರ" ಎಂಬ ಗೀತೆಯ ಪ್ರಾರ್ಥನೆ ಯೊಂದಿಗೆ ಸಭೆಯ ಆರಂಭ. ಅಂದಿನ ಸಭೆಯ ಹಾಗೂ ಭೋಜನದ ವ್ಯವಸ್ಥೆ ಹಾಗೂ ಕಾರ್ಯಕ್ರಮದ ಪ್ರಾಯೋಜಕರಾದ ರೊ. ಸಿ. ಸತೀಶ್ ಕುಮಾರ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು. ಇದೇ ಸಂದರ್ಭದಲ್ಲಿ ರೊ.ಸಿ. ಸತೀಶ್ ಕುಮಾರ್‌ರವರು ಈ ಹಿಂದೆ ವಿದ್ಯಾರ್ಥಿಯೊಬ್ಬನಿಗೆ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯ ಒದಗಿಸಿದ್ದಕ್ಕೆ ನೆನೆಪಿನ ಕಾಣಿಕೆ ನೀಡಲಾಯಿತು.

ನಮ್ಮ ರೋಟರಿ ಕ್ಲಬ್‌ಗೆ ನೂತನ ಸದಸ್ಯರಾಗಿ ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ರೊ.ಚಂದ್ರಶೇಖರ್‌ರವರು ಸೇರ್ಪಡೆಗೊಂಡರು. ವೇದಿಕೆಯಲ್ಲಿ ಅವರು ತಮ್ಮ ಪತ್ನಿ ಶ್ರೀಮತಿ ಶೈಲಜಾರವರೊಂದಿಗೆ ಹಾಜರಿದ್ದರು. ರೊ.ಪಿಡಿಜಿ. ಡಾ. ಆರ್.ಡಿ. ಪ್ರಭುರವರು ಶ್ರೀ ಚಂದ್ರಶೇಖರ್‌ರವರಿಗೆ ಪಿನ್ ತೊಡಿಸಿ, ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪರವರು ರೋಟರಿ ಸಾಹಿತ್ಯವನ್ನು ನೀಡಿ ರೋಟರಿಗೆ ಬರಮಾಡಿಕೊಂಡರು.





ಇತ್ತೀಚೆಗೆ ಶಿಕಾರಿಪುರದಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪಾಲ್ಗೊಂಡ ನಮ್ಮ ಕ್ಲಬ್‌ನ ಸದಸ್ಯರಿಂದ ಕಾರ್ಯಕ್ರಮ : ಮೊದಲಿಗೆ ರೊ.ವನಿತಾ ಸಂದೀಪ್‌ರವರಿಂದ ಕುವೆಂಪು ವಿರಚಿತ "ಬಂದಿಹನು ಎನ್ನಿನಿಯ–ಇಂದೆನ್ನ ಎದೆಯ ಬನಕೆ" ಎಂಬ ಗೀತೆಯ ಗಾಯನ. ರೊ. ರಮಾಗೋಪಾಲ್‌ರವರಿಂದ ನಿಸಾರ್ ಅಹಮದ್‌ರವರಿಂದ ರಚಿಸಲ್ಪಟ್ಟ "ಅಲ್ಲಿ ನೋಡಲ್ಲಿ ಚಂದಿರನ ಚಲುವ – ಅಲ್ಲಿ ಮುಗಿಲಲ್ಲಿ ಚಂದಿರನ ಚಲುವ" ಗೀತೆಯ ಗಾಯನ. ರೊ. ಎಂ.ಎನ್. ಎಸ್. ಮಣಿಯವರಿಂದ ಸಂತ ಶಿಶುನಾಳ ಷರೀಫರ "ತರವಲ್ಲತೆಗಿ ನಿನ್ನ ತಂಬೂರೀ ಸ್ವರ ಬರಿದೇ ಬಾರಿಸದಿರೋ ತಂಬೂರಿ" ಗಾಯನ ವಾಯಿತು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 04–12–2024 ಬುಧವಾರ** **ಸಂಜೆ 6:45**

**ಅತಿಥಿ: ಡಾ. ಗಿರೀಶ್ ಕುಮಾರ್**

**ಕನ್ಸಲ್ಟೆಂಟ್ ಆರ್ಥೋಪೆಡಿಕ್ ಮತ್ತು ರೋಬೋಟಿಕ್**
**ನೀ ರೀಪ್ಲೇಸ್‌ಮೆಂಟ್ ಸರ್ಜನ್**
**ಆರಾಧನ ಆರ್ಥೋಪೆಡಿಕ್ ಸೆಂಟರ್, ಶಿವಮೊಗ್ಗ**

**ವಿಷಯ: ಮೂಳೆ ರಂಧ್ರತೆ–ಮೂಳೆ ಸವೆತ**

**OSTEO POROSIS – ನಿಶ್ಯಬ್ದ ಕಾಯಿಲೆ ನಿಮಗೆಷ್ಟು ಗೊತ್ತು?**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ







ಇದೇ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಮಾಜಿ ನಿರ್ದೇಶಕರು ಹಾಲಿ ಕರ್ನಾಟಕ ಸಂಘದ ಅಧ್ಯಕ್ಷರೂ ಆಗಿರುವ ಶ್ರೀ ಹೆಚ್.ಆರ್.ಶಂಕರ ನಾರಾಯಣ ಶಾಸ್ತ್ರಿಯವರು ಅವರ ಪತ್ನಿ ಶ್ರೀಮತಿ ರಮಾಶಾಸ್ತ್ರಿರವರು ಆಗಮಿಸಿದ್ದು ಅವರುಗಳನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಶ್ರೀ ಹೆಚ್.ಆರ್.ಶಂಕರ ನಾರಾಯಣ ಶಾಸ್ತ್ರಿಯವರ ಪರಿಚಯ ಮಾಡಿದರು. ರೋಟರಿಯಲ್ಲಿದ್ದಾಗ ಅವರು ರೋಟರಿಗಾಗಿ ಸಲ್ಲಿಸಿದ ಸೇವೆ ಅನುಪಮವಾದದ್ದು. ಅವರು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ರೋಟರಿಯಿಂದ ಸ್ಕಾಲರ್ ಶಿಪ್ ದೊರಕುವಂತೆ ಮಾಡುತ್ತಿದ್ದಂತಹ ಕೆಲಸಗಳು ಇಂದಿಗೂ ನೆನಪಿಸಿಕೊಳ್ಳಬೇಕು ಎಂದರು. ಇವರಿಗೆ ಅಭಿನಂದಿಸಲು ರೊ. ಪಿಡಿಜಿ. ಡಾ.ಆರ್.ಡಿ.ಪ್ರಭು, ರೊ.ಡಿ.ಎಸ್. ನಟರಾಜ್, ರೊ. ರಮಾಗೋಪಾಲ್, ರೊ. ವೈ.ವಿ.ವೆಂಕಟರಮಣ ಜೋಯ್ಸ್, ಅಧ್ಯಕ್ಷರು ಮತ್ತು ಕಾರ್ಯದರ್ಶಿ, ರೊ.ಎನ್.ವಿ. ಭಟ್ ಜೊತೆಗಿದ್ದರು.

ರೊ. ಹೆಚ್.ಆರ್. ಶಂಕರನಾರಾಯಣ ಶಾಸ್ತ್ರಿಯವರು ತಮಗೆ ಅಭಿನಂದಿಸಿದ್ದಕ್ಕಾಗಿ ವಂದನೆ ತಿಳಿಸಿ, ರೋಟರಿಯನ್ನು ಸೇರಿ ನನ್ನ ಜೀವನದ ವ್ಯಕ್ತಿತ್ವವೇ ಬದಲಾಯಿತು. ಹಾಲಿ ನನಗೆ ಕೆಲಸದ ಒತ್ತಡಗಳಿದ್ದು, ಅದು ಕಡಿಮೆಯಾದ ನಂತರ ಪುನಃ ಈ ರೋಟರಿಗೆ ಸೇರ್ಪಡೆಗೊಳ್ಳುತ್ತೇನೆ ಎಂದರು. ಶ್ರೀಮತಿ ರಮಾ ಶಾಸ್ತ್ರಿಯವರು ಸ್ವರಚಿತ ಕವನಗಳನ್ನು ಓದಿದರು.

ರೊ. ಡಿ.ಎಲ್. ಮಂಜುನಾಥ್ ಕುಟುಂಬದವರು ರೂ.10000.00 ವನ್ನು ದೇಣಿಗೆಯಾಗಿ ರೋಟರಿ ಫೌಂಡೇಷನ್‌ಗೆ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮವು ಮುಂದುವರೆದು, ರೊ.ಸುಮಲತಾ ಭೂಪಾಳಂ ಮತ್ತು ರೊ. ಎಂ.ಎನ್.ಎಸ್. ಮಣಿಯವರು "ನೀಲ ಮೇಘ ಗಾಳಿ ಬೀಸಿ ತೂಗಾಡೊ ಹಾಗೆ" ಎಂಬ ಚಲನಚಿತ್ರ ಯುಗಳ ಗೀತೆ ಹಾಡಿದರು. ರೊ. ಸುಮಲತಾ ಭೂಪಾಳಂ, ರೊ. ವೈ.ವಿ.ವೆಂಕಟರಮಣ ಜೋಯ್ಸ್, ರೊ.ಎಂ.ಎನ್.ಎಸ್. ಮಣಿ, ರೊ.ಮಲ್ಲಿಕಾ ವಿ.ಜೋಯ್ಸ್, ರೊ. ಪ್ರಮೋದಾ ಶಾಸ್ತ್ರಿ, ರೊ. ವನಿತಾ ಸಂದೀಪ್, ಮುಂತಾದವರೆಲ್ಲಾ ಸೇರಿ "ಮಳೆ ಬರುವ ಕಾಲಕ್ಕೆ ಒಳಗ್ಯಾಕೆ ಕೂತೇವು. ಇಳೆಯೊಳಗೆ ಜಳಕಾ ಮಾಡೋಣ" ಎಂಬ ಜಾನಪದ ಗೀತೆಯನ್ನು ಸಾಮೂಹಿಕವಾಗಿ ಹಾಡಿ ರಂಜಿಸಿದರು. ರೊ.ಡಾ. ಗಿರೀಶ್ ಕುಮಾರ್‌ರವರು "ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಡಾ.ರಾಜ್‌ರವರ ಹಾಡು ಹಾಡಿದರು. ರೊ.ಡಾ. ಶೋಭಾ ಗಿರೀಶ್‌ರವರಿಂದ ಮತ್ತು ಕು.ಆರಾಧನ ಇವರಿಂದ ನೀಡಲ್ಪಟ್ಟ ನೃತ್ಯ ಕಾರ್ಯಕ್ರಮ ಸರ್ವರನ್ನು ರಂಜಿಸಿತು.






**ವಿವಾಹ ವಾರ್ಷಿಕೋತ್ಸವ ಕಾರ್ಯಕ್ರಮ:** ರೊ. ಸಿ.ಸತೀಶ್ ಕುಮಾರ್ ಮತ್ತು ಶ್ರೀಮತಿ ರೂಪಾ ಹಾಗೂ ನೂತನ ಸದಸ್ಯರಾದ ರೊ. ಹೆಚ್.ಚಂದ್ರಶೇಖರ ಮತ್ತು ಶ್ರೀಮತಿ ಶೈಲಜಾರವರು ವೇದಿಕೆಗೆ ಆಗಮಿಸಿ ತಮ್ಮ ವಿವಾಹ ವಾರ್ಷಿಕೋತ್ಸವದ ಅಭಿನಂದನೆ ಸ್ವೀಕರಿಸಿದರು. "ನಾ ನಿನ್ನ ಮರೆಯಲಾರೆ" ಎಂಬ ಹಾಡಿಗೆ ರೊ.ಎಸ್.ಜಿ. ಗೋಪಾಲ್ ಶ್ರೀಮತಿ ರಮಾಗೋಪಾಲ್, ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ರೊ.ಎನ್.ಜಿ. ಉಷಾ, ರೊ.ಎನ್.ವಿ.ಭಟ್, ಶ್ರೀಮತಿ ಭಾರ್ಗವಿ ಭಟ್, ರೊ. ಹೆಚ್.ಚಂದ್ರಶೇಖರ ಶ್ರೀಮತಿ ಶೈಲಜಾ ಹೆಜ್ಜೆ ಹಾಕಿದರು.

ಕೊನೆಯಲ್ಲಿ ರೊ.ಎನ್.ಜಿ. ಉಷಾ ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ರೊ. ವೈ.ವಿ.ವೆಂಕಟರಮಣ ಜೋಯ್ಸ್‌ರವರಿಂದ 'ಭಾರತ ಮಾತಾಕಿ ಜೈ ಉದ್ಘೋಷವಾಯಿತು. ರೊ. ಸತೀಷ್‌ಕುಮಾರ್ ಏರ್ಪಡಿಸಿದ್ದ ರುಚಿಕಟ್ಟಾದ ಭೋಜನವನ್ನು ಆಗಮಿಸಿದ್ದ ರೋಟರಿ ಸದಸ್ಯರುಗಳು ಸವಿದರು.



**ನಮ್ಮ ಕ್ಲಬ್ ಸದಸ್ಯರು ಡಾ. ಉಷಾ ಪ್ರಭುರವರಿಗೆ ಜನ್ಮ ದಿನದ ಶುಭಾಶಯಗಳನ್ನು ಕೋರಲಾಯಿತು.**

## TRF and END POLIO DISTRICT SEMINAR IN BRAHMAVARA






ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರು
PHF Contribution ಗೆ 42000/- ಚೆಕ್ ನೀಡಿದರು.



ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು
PHF Contribution ಗೆ 42000/- ಚೆಕ್ ನೀಡಿದರು.





ಸೆಮಿನಾರ್‌ನಲ್ಲಿ ಪಿಡಿಜಿ ಡಾ. ಪಿ. ನಾರಾಯಣ್‌ರವರ ಭಾಷಣ

## *Happy Birthday Wishes*



*Dr. Udaya V.Rao*
*04th Dec*



*Suneetha Sreedhar*
*05th Dec*



*Nataraj D.S.*
*07th Dec*

## Sri Bhagat Singh RCC Inauguration at Kumsi Rtn. N.V. Bhat, Rtn. K.C. Dasharath and Rtn. S. Manjunath Participated









ಭಗತ್‌ಸಿಂಗ್ ಆರ್‌ಸಿಸಿ ಕುಂಸಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ
ಸೈಕಲ್ಸ್ ಸ್ಪರ್ಧೆ ವಿಜೇತರಿಗೆ ನಮ್ಮ ಕ್ಲಬ್‌ನಿಂದ ಸೈಕಲ್ ಬಹುಮಾನ.





District Project Road Safety Essay Competition
and Prize Distribution in
Mahaveera Vidyalaya at Shivamogga



## ಸಂಪಾದಕೀಯ

# ನಮ್ಮ ಭವಿಷ್ಯ ನಮ್ಮ ಕೈಯಲ್ಲೇ...!

ಒಂದು ಊರಿನಲ್ಲಿ ಒಬ್ಬ ತತ್ವಜ್ಞಾನಿ ಇದ್ದ. ಅವನು ಹೇಳಿದ್ದೆಲ್ಲ ನಿಜವಾಗುತ್ತಿತ್ತು. ಆ ಊರಿನ ಇಬ್ಬರು ಕಿಡಿಗೇಡಿ ಹುಡುಗರಿಗೆ ಏನಾದರೂ ಮಾಡಿ ಇವರ ಬಾಯಿಂದ ಸುಳ್ಳು ಹೊರಡಿಸಬೇಕೆಂಬ ಕೆಟ್ಟ ಆಸೆ. ಅದಕ್ಕಾಗಿ ಅವರು ಒಂದು ಉಪಾಯ ಮಾಡಿದರು. ಒಂದು ಪುಟಾಣಿ ಹಕ್ಕಿ ಮರಿಯನ್ನು ತಮ್ಮ ಮುಷ್ಠಿಯೊಳಗೆ ಹಿಡಿದುಕೊಂಡು ಹೋಗಿ ಇದರೊಳಗೆ ಇರುವುದೇನು ಎಂದು ತತ್ವಜ್ಞಾನಿಯನ್ನು ಪ್ರಶ್ನಿಸಿದರು. ಎಲ್ಲವನ್ನು ಬಲ್ಲವನಾದ ಆತ 'ಅದೊಂದು ಪುಟ್ಟ ಹಕ್ಕಿಮರಿ' ಎಂದು ಉತ್ತರಿಸಿದ. ಮುಂದಿನ ಪ್ರಶ್ನೆಗೆ ಅವನು ಕೊಡುವ ಉತ್ತರ ಸುಳ್ಳಾಗಲೇಬೇಕು ಆ ರೀತಿ ಇತ್ತು. ಅವರ ಯೋಜನೆ. 'ಅದು ಬದುಕಿದೆಯೋ ಇಲ್ಲ ಸತ್ತಿದೆಯೋ' ಎಂಬುದಾಗಿತ್ತು ಅವರ ಪ್ರಶ್ನೆ. ತತ್ವಜ್ಞಾನಿ ಹೇಳುವ ಉತ್ತರವನ್ನು ಸುಳ್ಳು ಮಾಡಲು ಆತ ಹಕ್ಕಿಮರಿ ಬದುಕಿದೆ ಎಂದರೆ, ಅದನ್ನು ಆ ಕಿಡಿಗೇಡಿ ಹುಡುಗರು ಮುಷ್ಠಿಯಿಂದ ಹಿಚುಕಿ ಸಾಯಿಸಿಬಿಡುತ್ತಿದ್ದರು. ಅದು ಸತ್ತಿದೆ ಎಂದರೆ ಹಾಗೆ ಹಾರಲು ಬಿಡುತ್ತಿದ್ದರು. ಇವರ ಉದ್ದೇಶವನ್ನರಿತ ತತ್ವಜ್ಞಾನಿ 'ಅದರ ಭವಿಷ್ಯ ನಿಮ್ಮ ಕೈನಲ್ಲೇ ಇದೆ' ಎಂದು ಉತ್ತರಿಸಿದ.

ನಮ್ಮ ಭವಿಷ್ಯ ನಮ್ಮ ಕೈಯಲ್ಲಿ ಇರುತ್ತದೆ. ಅದನ್ನು ಹಿಸುಕಿ ಸಾಯಿಸುವ ಅಥವಾ ಸ್ವಚ್ಛಂದವಾಗಿ ಹಾರಿ ಬಿಡುವ ಶಕ್ತಿ ನಮ್ಮ ಕೈಯಲ್ಲೇ ಇದೆ. ನಾವೇ ನಮ್ಮ ಭವಿಷ್ಯದ ಶಿಲ್ಪಿಗಳು. ನಮ್ಮೊಳಗಿರುವ ಶಿಲೆಯನ್ನು ವ್ಯಕ್ತಿತ್ವವೆಂಬ ಸುಂದರ ಶಿಲ್ಪವಾಗಿ ರೂಪಿಸಿಕೊಳ್ಳಬೇಕಾದವರು ನಾವೇ. ಅದಕ್ಕೆ ಅತಿ ಮುಖ್ಯವೆಂದರೆ ಸಿಕ್ಕಿರುವ ಸದವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಮನಸ್ಥಿತಿ. ಇದನ್ನು ಇಂಗ್ಲೀಷ್‌ನಲ್ಲಿ Grabbing the opportunity ಎನ್ನುತ್ತಾರೆ.

ನಮ್ಮ ಭವಿಷ್ಯ ನಮ್ಮ ಕೈ ರೇಖೆಯಾಗಲಿ, ಹಣೆ ಬರಹದಲ್ಲಾಗಲಿ ಖಂಡಿತ ಅಡಗಿಲ್ಲ. ಅದು ಸೂಕ್ತ ಸಮಯದಲ್ಲಿ ನಾವು ತೆಗೆದುಕೊಳ್ಳುವ ಸರಿಯಾದ ನಿರ್ಧಾರವನ್ನು ಅವಲಂಬಿಸಿರುತ್ತದೆ.

• ರೊ. ಎಂ. ಮಾಧವಾಚಾರ್

---

TUNGA ROTARY ZONAL SPORTS

THE MAGIC OF ROTARY

**ROTARY ZONE 10 - RID 3182**

**ZONAL SPORTS 2024**

**Dear Rotarians of all clubs under Zone 10, RID 3182**

We are pleased to inform you all that ZONAL SPORTS of our Zone 10 for this year will be held on 08.12.2024 December 2024, Sunday at Shivamogga. The event will be hosted by Rotary Club Shimoga Riverside. The details and list of the events at the Zonal level and other terms and conditions are given here below.

**Date of the event :** 08th December 2024 (SUNDAY)

**VENUE AND TIME**

**A) OUTDOOR GAMES (Morning Session)**

**MOUNT CARMEL SCHOOL VIDYANAGARA SHIMOGA**

**From 08.30 a.m to 1.00 p,m.**

**B) INDOOR GAMES (Afternoon Session)**

**Indoor Neharu Stadium RTO Office Road, Shivamogga**

**From 02.30 p.m to 06.30 p.m.**

**LIST OF EVENTS**

**A. ROTARIANS:**

**Indoor Games** : Carrom Doubles, Chess, Shuttle Badminton Singles and Doubles. **Outdoor Games** : Cricket, Volley Ball, Tug of War

**B. LADY ROTARIANS & ANNS :**

**Indoor Games** : Carrom Doubles, Chess, Shuttle Badminton Singles and Doubles. **Outdoor Games** : Throw Ball, Tug of War

**Note** : Under Shuttle Badminton there will be two age groups. 1. Age 45 and below 2. Age 46 and above and PLAYERS HAVE TO PLAY IN THEIR RESPECTIVE AGE GROUP ONLY. C. ANNETS & JOHNS : Indoor Games : Chess, Shuttle Badminton Singles and Doubles

**Note :** There will be Athletic events at District Level (not at zonal level) under all categories and the entries are open to all. The interested members can register their names directly with their Club President as per the Annexure A and the same should be handed over to Asst. Governor before 08.12.2004 by the Club Presidents.

---

**'ನವೋತ್ಸವ' – ರೋಟರಿ ಜಿಲ್ಲಾ ಸಮ್ಮೇಳನ ಕಾರ್ಯಕ್ರಮವು ಸಾಕಷ್ಟು ಮನರಂಜನೆ, ಉತ್ತಮ ಭಾಷಣಕಾರರು, ಸಾಂಸ್ಕೃತಿಕ ಚಟುವಟಿಕೆಗಳು, ಮೌಲ್ಯಯುತವಾದ ಉಪಯುಕ್ತ ಕಿಟ್, ಅತ್ಯುತ್ತಮ ರುಚಿಕರವಾದ ಆಹಾರಗಳು, ಫೆಲೋಶಿಪ್ ಡಿನ್ನರ್, ತುಂಬಾ ಒಳ್ಳೆಯ ವ್ಯವಸ್ಥೆಗಳು, ಹೀಗೆ ಕಾರ್ಯಕ್ರಮದ ವಾತಾವರಣವು ಎಲ್ಲರಿಗೂ * ಮ್ಯಾಜಿಕ್ ಕ್ಷಣಗಳನ್ನು ಸೃಷ್ಟಿಸುತ್ತದೆ * ರೋಟರಿ ಮಿತ್ರರು ದಯವಿಟ್ಟು ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಲು ಯೋಜಿಸಿ.**

Rotary District 3182 | THE MAGIC OF ROTARY

ನವೋತ್ಸವ navotsava 2025

ರೋಟರಿ ಮನಸುಗಳ ಮಧುರ ಮಿಲನ

## DISTRICT CONFERENCE

**24, 25 & 26 January, 2025**

**Amrith Garden, NH 66, Ambagilu, UDUPI**

*For more information, please contact:*

District Governor: 94481 26033

District Conference Chairman: 98450 04211

Conference Registration Committee Chairman: 97415 10329, 94487 23684

You are Invited

Scan to Register

---

## ಚಿಂತನ

ನಾವು ಯಾವುದೇ ಸಾಧನೆ ಮಾಡಬೇಕಾದರೆ ಗುರಿ ಅಥವಾ ಉದ್ದೇಶ ಮುಖ್ಯ. ಗುರಿ ಎಷ್ಟು ಮುಖ್ಯವೋ ಆ ಗುರಿಯನ್ನು ತಲುಪುವ ಮಾರ್ಗವೂ ಅಷ್ಟೇ ಮುಖ್ಯ. ಅದನ್ನು ತಲುಪಲು ಸತ್ಯ, ಅಹಿಂಸೆ, ಸರಳತೆ ಮತ್ತು ನೈತಿಕತೆ ಇರಬೇಕು. ಯಾವುದೇ ವಂಚನೆ, ದ್ರೋಹ, ಹಿಂಸೆಯ ಸಾಧನಗಳು ಒಳ್ಳೆಯದಲ್ಲ. ಇವುಗಳ ಬಗ್ಗೆ ಯುವಜನತೆಗೆ, ಮಕ್ಕಳಿಗೆ ಮಾರ್ಗದರ್ಶನ ನೀಡುವುದು ಅಗತ್ಯ.

– ರೊ. ಕೆ. ಸೂರ್ಯನಾರಾಯಣ ಉಡುಪ

---

To, *Book Post*